**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ:595/2021**
**ಚಾಸಾ - 03 / ಪ್ರಾಸಾ - 01**

| | |
|---|---|
| ಹೆಸರು | **ರೇಣುಕಾಪ್ರಸಾದ್** |
| ತಂದೆಯ ಹೆಸರು | **ಗುರುಸಿದ್ದಪ್ಪ** |
| ವಯಸ್ಸು | **67** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಚುಂಚನಕುಪ್ಪೆ** |

**ದಿನಾಂಕ: 02-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ನಿಪಿ-1 ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಾನು ಅಪಘಾತದ ವಿಷಯಕ್ಕೆ ಸಂಬಂಧಿಸಿದಂತೆ ನಿಪಿ-1 ಕ್ಕ ನನ್ನ ಸಹಿಯನ್ನು ಮಾಡಿರುತ್ತೇನೆ. ನನಗೆ ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇಲ್ಲ. ಪೋಲೀಸರು ಅವರು ಮೊದಲೇ ಅಮಾನತು ಪಡಿಸಿಕೊಂಡಿರುವ ವಾಹನಕ್ಕೆ ಸಾಕ್ಷಿಯಾಗಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ಸಾಕ್ಷಿಗೆ 3 ಪೋಟೋಗಳನ್ನು ತೋರಿಸಿದ್ದು, ಅದರಲ್ಲಿರುವ ವಾಹನಗಳನ್ನು ಪೋಲೀಸರು ವಶಪಡಿಸಿ ಕೊಂಡಿರುತ್ತಾರೆ. ಸದರಿ ಪೋಟೋಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿಃ 02-11-2021 ರಂದು ಬೆಳಿಗ್ಗೆ 8.00 ರಿಂದ 8.45 ರ ಸಮಯದಲ್ಲಿ ಪೋಲೀಸರು ಚಾಸಾ-2 ರವರು ತೋರಿಸಿದ ಜಾಗದಲ್ಲಿ ನಿಪಿ-1 ರಂತೆ ಪಂಚನಾಮೆಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಜೊತೆ ನಿಪಿ-1 ಕ್ಕೆ ಚಾಸಾ-2 ಮತ್ತು 4 ರವರು ಸಹಿಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಟಿಪ್ಪರ್ ಲಾರಿ ಸಂ.ಕೆಎ-02-ಎಹೆಚ್-0162 ಮತ್ತು ದ್ವಿಚಕ್ರ ವಾಹನ ಸಂ.ಕೆಎ-02-ಹೆಚ್ ಪಿ-7125 ವಾಹನಗಳನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1 ರಲ್ಲಿ ಇರುವ ವಿಷಯವನ್ನು ಪೋಲೀಸರು ನಿಮಗೆ ಓದಿ ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಕಚ್ಚಾ ನಕ್ಷೆಯನ್ನು ತಯಾರು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಪಘಾತವು ನಡೆದು ಸುಮಮ 3 ವರ್ಷಗಳು ಆಗಿರುವ ಕಾರಣದಿಂದ ನೀವು ದಿನಾಂಕ ಮತ್ತು ಈ ಮೇಲೆ ಹೇಳಿರುವ ವಾಹನಗಳ ಸಂಖ್ಯೆಯನ್ನು ಮರಿತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ.ಎಂ.ಎನ್, ವಕೀಲರಿಂದಃ-**

ಪೋಲೀಸರು ಕಚ್ಚಾ ನಕ್ಷೆಯನ್ನು ಪೋಲೀಸ್ ಠಾಣೆಯಲ್ಲಿಯೇ ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.ಈ ಮೇಲೆ ಹೇಳಿರುವ ವಾಹನಗಳು ಠಾಣೆಯಲ್ಲಿಯೇ ಇದ್ದವು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು, ಚಾಸಾ-2 ಮತ್ತು 4 ರವರು ನಿಪಿ-1 ಕ್ಕೆ ಪೋಲೀಸ್ ಠಾಣೆಯಲ್ಲಿಯೇ ಸಹಿಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನಗೆ ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರು ಪಂಚನಾಮೆಗೆ ಬರುವಂತೆ ಹೇಳಿ ನಿಮಗೆ ಯಾವುದೇ ನೋಟೀಸನ್ನು

-

ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪೋಲೀಸರು ಸ್ಥಳದಲ್ಲಿ ಪಂಚನಾಮೆಯನ್ನು ಮಾಡದಿದ್ದರೂ ಸಹ ನೀವು ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯಾ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ :595/2021**
**ಚಾಸಾ - 04 / ಪ್ರಾಸಾ - 02**

| | |
|---|---|
| ಹೆಸರು | **ನಾಗರಾಜು ಕೆ** |
| ತಂದೆಯ ಹೆಸರು | **ಕೆಂಪಯ್ಯ** |
| ವಯಸ್ಸು | **60** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಚುಂಚನಕುಪ್ಪೆ** |

**ದಿನಾಂಕಃ 02-05-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ನಿಪಿ-1 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-1 (ಬಿ) ಎಂದು ಗುರುತಿಸಲಾಯಿತು. ನಾನು ನಿಪಿ-1 ಕ್ಕೆ ಪೋಲೀಸ್ ಠಾಣೆಯಲ್ಲಿ ನನ್ನ ಸಹಿಯನ್ನು ಮಾಡಿರುತ್ತೇನೆ. ನನಗೆ ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೋಲೀಸರು ಯಾವುದೇ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿಃ 02-11-2021 ರಂದು ಬೆಳಿಗ್ಗೆ 8.00 ರಿಂದ 8.45 ರ ಸಮಯದಲ್ಲಿ ಪೋಲೀಸರು ಚಾಸಾ-2 ರವರು ತೋರಿಸಿದ ಜಾಗದಲ್ಲಿ ನಿಪಿ-1 ರಂತೆ ಪಂಚನಾಮೆಯನ್ನು ಮಾಡಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ನಿಮ್ಮ ಜೊತೆ ನಿಪಿ-1ಕ್ಕೆ ಪ್ರಾಸಾ-1 ಮತ್ತು ಚಾಸಾ-2ರವರು ಸಹಿಯನ್ನು ಮಾಡಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಟಿಪ್ಪರ್ ಲಾರಿ ಸಂ.ಕೆಎ-02-ಎಹೆಚ್-0162 ಮತ್ತು ದ್ವಿಚಕ್ರವಾಹನ ಸಂ.ಕೆಎ-02-ಹೆಚ್ ಪಿ -7125 ವಾಹನಗಳನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ರಲ್ಲಿ ಇರುವ ವಿಷಯವನ್ನು ಪೋಲೀಸರು ನಿಮಗೆ ಓದಿ ತಿಳಿಸಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಕಚ್ಚಾ ನಕ್ಷೆಯನ್ನು ತಯಾರು ಮಾಡಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅಪಘಾತವು ನಡೆದು ಸುಮಾರು 3 ವರ್ಷಗಳು ಆಗಿರುವ ಕಾರಣದಿಂದ ನೀವು ದಿನಾಂಕ ಮತ್ತು ಈ ಮೇಲೆ ಹೇಳಿರುವ ವಾಹನಗಳ ಸಂಖ್ಯೆಯನ್ನು ಮರಿತಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಪಾಟೀ ಸವಾಲು - ಆರೋಪಿಯ ಪರ ಶ್ರೀ. ಎಂ.ಎನ್, ವಕೀಲರಿಂದ ಃ-**

ಆರೋಪಿಯ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**